E- 7031379/2023

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ:-** ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ ಇದರ ಆಡಳಿತ ಮಂಡಳಿಯ ಅವ್ಯವಹಾರಗಳ ಕುರಿತು ಈಗಾಗಲೇ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯಾಗಿ ಎಫ್ಐಆರ್ ದಾಖಲಾಗಿರುತ್ತದೆ. 2021-22 ಮತ್ತು 2022-23 ನೇ ಸಾಲಿನಲ್ಲಿ ಕಾರ್ಖಾನೆಯ ತಾಮ್ರ, ಕಬ್ಬಿಣ, ಅಲ್ಯೂಮಿನಿಯಂ, ಕಲ್ಲು, ಶಿಲೆ ಇತ್ಯಾದಿ ಗುಜರಿಗಳ ಹರಾಜಿನಲ್ಲಿ ನೈಜವಾದ ಲೆಕ್ಕಪತ್ರ ನೀಡದೆ ಸುಮಾರು 14 ಕೋಟಿಗೂ ಹೆಚ್ಚಿನ ಅವ್ಯವಹಾರ ಆಗಿರುವುದಾಗಿ ಹಾಗೂ ಹರಾಜಿನಲ್ಲಿ ಬಿಡ್ ಮಾಡಿರುವ ಬಿಡ್ಡುದಾರರಿಂದ ಭದ್ರತಾ ಠೇವಣಿಯನ್ನು ಆಡಳಿತ ಮಂಡಳಿಯು ಪಡೆಯದಿರುವುದರಿಂದ ಕಾರ್ಖಾನೆಗೆ ಆರ್ಥಿಕ ರಕ್ಷಣೆ ದೊರೆಯದೇ, ಪ್ರಸ್ತುತ ಬಾಕಿ ವಸೂಲಿಗಾಗಿ ನ್ಯಾಯಾಲಯದ ಮೊರೆ ಹೋಗುವಂತಾಗಿರುವುದಾಗಿ ದೂರಿನಲ್ಲಿ ದಾಖಲಿಸಲಾಗಿದೆ.

ಕಾರ್ಖಾನೆಯ 2022-23ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯು ದಿನಾಂಕ:25.09.2022ರಂದು ನಡೆದಿದ್ದು, ಸಾಮಾನ್ಯ ಸಭೆಯಲ್ಲಿ ಸುಮಾರು 365 ಅರ್ಹ ಸದಸ್ಯರು ಹಾಜರಿದ್ದು, ಸಭೆಯಲ್ಲಿ ಆಪಾದಿತರ ಮೇಲೆ ಕ್ರಿಮಿನಲ್ ದಾವೆ ದಾಖಲಿಸುವಂತೆ ನಿರ್ಣಯಿಸಲಾಗಿದ್ದರೂ ಸಹ, ಆಡಳಿತ ಮಂಡಳಿಯವರು ಪೊಲೀಸ್ ದೂರನ್ನು ದಾಖಲಿಸುವ ಸಭೆಯ ನಿರ್ಣಯವನ್ನು ತಿರುಚಿ ಸ್ವೇಚ್ಛಾಚಾರದಿಂದ ತಮಗೆ ಬೇಕಾದಂತೆ ಸುಳ್ಳು ನಿರ್ಣಯವನ್ನು ಬರೆದಿರುವುದಾಗಿ ಜಿಲ್ಲಾ ರೈತ ಸಂಘದವರು ದೂರಿರುತ್ತಾರೆ.

2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಾರ್ಖಾನೆಯ ಆಡಳಿತ ಮಂಡಳಿಯ ಕೈ ಸೇರಿದ್ದರೂ ದಿನಾಂಕ 25.09.2023ರ ಸರ್ವ ಸದಸ್ಯರ ಸಭೆಗೆ ಉದ್ದೇಶಪೂರ್ವಕವಾಗಿ ಅವ್ಯವಹಾರವನ್ನು ಮುಚ್ಚಿ ಹಾಕುವ ದೃಷ್ಟಿಯಿಂದ ಮಂಡನೆ ಮಾಡಿರುವುದಿಲ್ಲ. ಈಗಿನ ಆಡಳಿತ ಮಂಡಳಿಯು ಸರಕಾರದ ಕಾಯಿದೆ, ನಿಯಮ ಮತ್ತು ಬೈಲಾಗಳನ್ನು ದುರುದ್ದೇಶದಿಂದ ಉಲ್ಲಂಘಿಸಿರುವ ಕುರಿತು ಸೂಕ್ತ ತನಿಖೆ ನಡೆಸಿ, ಸಾರ್ವಜನಿಕರ ಹಾಗೂ ರೈತರ ಹಿತದೃಷ್ಟಿಯಿಂದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ, ಆಡಳಿತಾಧಿಕಾರಿ/ ವಿಶೇಷಾಧಿಕಾರಿಯನ್ನು ನೇಮಿಸುವ ವಿಷಯದ ಕುರಿತು ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಸರ್ಕಾರದ ಉತ್ತರ:-**

ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಬ್ರಹ್ಮಾವರ, ಉಡುಪಿ ಜಿಲ್ಲೆ ಈ ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಗೊಂಡಿದ್ದು, 1,250 ಟಿ.ಸಿ.ಡಿ. ಸಾಮರ್ಥ್ಯದೊಂದಿಗೆ 1985ರಲ್ಲಿ ಕಾರ್ಯಾರಂಭಗೊಂಡಿರುತ್ತದೆ. ಈ ಕಾರ್ಖಾನೆಯು ಒಟ್ಟು 110 ಎಕರೆ ಜಮೀನನ್ನು ಹೊಂದಿರುತ್ತದೆ.

ಈ ಕಾರ್ಖಾನೆಯ ಕಬ್ಬು ಮೀಸಲು ಕ್ಷೇತ್ರವು ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಮತ್ತು ಮತ್ತು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕುಗಳನ್ನು ಒಳಗೊಂಡಿರುತ್ತದೆ. ಸದರಿ ಕಾರ್ಖಾನೆಗೆ ಅಗತ್ಯವಾದಷ್ಟು ಪ್ರಮಾಣದ ಕಬ್ಬು ಕಾರ್ಖಾನೆಯ ಮೀಸಲು ಕ್ಷೇತ್ರದಲ್ಲಿ ಲಭ್ಯವಿಲ್ಲದಿರುವುದರಿಂದ ಹಾಗೂ ಈ ಕಾರ್ಖಾನೆಯು ಆರ್ಥಿಕ ಸಂಕಷ್ಟಕ್ಕೆ ಗುರಿಯಾದ ಹಿನ್ನಲೆಯಲ್ಲಿ, 2003-04ನೇ ಸಾಲಿನಿಂದ ಕಬ್ಬು ಅರೆಯುವ ಕಾರ್ಯವು ಸ್ಥಗಿತಗೊಳಿಸಲಾಗಿದೆ. ಆದ್ದರಿಂದ, ಈ ಕಾರ್ಖಾನೆಯನ್ನು ದಿನಾಂಕ:16.04.2006ರಿಂದ ಮುಚ್ಚಲಾಗಿದ್ದು, ಈ ದಿನಾಂಕದಂದೇ ಕಾರ್ಖಾನೆಯ 166 ನೌಕರರುಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿರುತ್ತದೆ.

ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬ್ರಹ್ಮಾವರ, ಉಡುಪಿ ಜಿಲ್ಲೆ ಈ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆಯನ್ನು ಸ್ಥಗಿತಗೊಳಿಸಿ 17 ವರ್ಷಗಳು ಕಳೆದಿರುವುದರಿಂದ ಕರಾವಳಿ ತೀರದ ಉಪ್ಪು ನೀರಿನ ವಾತಾವರಣದಿಂದಾಗಿ ಕಾರ್ಖಾನೆಯ ಕಬ್ಬಿಣದ ಯಂತ್ರೋಪಕರಣಗಳು ಸಂಪೂರ್ಣ ತುಕ್ಕು ಹಿಡಿದು ಹಾಳಾಗಿದ್ದು, ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿದ್ದವು. ಈ ತುಕ್ಕು ಹಿಡಿದಿರುವ ಯಂತ್ರೋಪಕರಣಗಳನ್ನು ಹಾಗೇ ಇಟ್ಟುಕೊಂಡಲ್ಲಿ, ಮುಂದೆ ಮಾರಾಟ ಮಾಡುವುದಕ್ಕೂ ಸಹ ಯೋಗ್ಯವಾಗುವುದಿಲ್ಲ ಮತ್ತು ಬೆಲೆ ಬಾಳುವುದಿಲ್ಲವಾದ್ದರಿಂದ, ಕಾರ್ಖಾನೆಯ ಅನುಪಯುಕ್ತ ಹಾಗೂ ತುಕ್ಕು ಹಿಡಿದಿರುವ ಕಬ್ಬಿಣದ

ಸಂಪೂರ್ಣ ಯಂತ್ರೋಪಕರಣಗಳನ್ನು ಮತ್ತು ಕಟ್ಟಡವನ್ನು ಟೆಂಡರ್ ಮೂಲಕ ಮಾರಾಟ ಮಾಡಲು ಅನುಮತಿ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಬ್ರಹ್ಮಾವರ, ಉಡುಪಿ ಜಿಲ್ಲೆ ಇವರ ದಿನಾಂಕ:29.01.2021ರ ಪತ್ರದಲ್ಲಿ ಕೋರಿದ್ದರು.

ಮುಂದುವರಿದು, ಈ ಕಾರ್ಖಾನೆಯು ಕಳೆದ 17 ವರ್ಷಗಳಿಂದ ಕಾರ್ಯ ನಿರ್ವಹಿಸದೇ ಸ್ಥಗಿತಗೊಂಡಿದ್ದು, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ಇ-ಪೋರ್ಟಲ್ ವ್ಯವಸ್ಥೆ ಇರುವುದಿಲ್ಲವೆಂದು ಹಾಗೂ ಇವರಿಂದ ತುಕ್ಕು ಹಿಡಿದು ಹಾಳಾಗುತ್ತಿರುವ ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಇ-ಟೆಂಡರ್ ಮೂಲಕ ಮಾರಾಟ ಮಾಡಲು ಅನಾನುಕೂಲವಾಗಿರುತ್ತದೆ ಎಂದು ಹಾಗೂ ಈ ಹಿನ್ನೆಲೆಯಲ್ಲಿ ಈ ಕಾರ್ಖಾನೆಯ ತುಕ್ಕು ಹಿಡಿದು ಹಾಳಾಗುತ್ತಿರುವ ಯಂತ್ರೋಪಕರಣಗಳು ಮತ್ತು ನಿರುಪಯುಕ್ತ ಸಾಮಗ್ರಿಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡಲು ಅನುಮತಿ ನೀಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲು ದಿನಾಂಕ:18.08.2021 ರಂದು ಜರುಗಿದ ಕಾರ್ಖಾನೆಯ ಆಡಳಿತ ಮಂಡಳಿಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಅದರಂತೆ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಸಿಓಎಫ್/78/2020-21, ದಿನಾಂಕ:02.09.2021ರಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಬ್ರಹ್ಮಾವರ, ಉಡುಪಿ ಜಿಲ್ಲೆ- ಈ ಕಾರ್ಖಾನೆಯಲ್ಲಿ ತುಕ್ಕು ಹಿಡಿದು ಹಾಳಾಗುತ್ತಿರುವ ಹಳೆಯ ಯಂತ್ರೋಪಕರಣಗಳು ಹಾಗೂ ನಿರುಪಯುಕ್ತ ಸಾಮಗ್ರಿಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡಲು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಲಾಗಿರುತ್ತದೆ.

ಈ ಕಾರ್ಖಾನೆಯು 1,250 ಟಿ.ಸಿ.ಡಿ. ಸಾಮರ್ಥ್ಯದ ಸಕ್ಕರೆ ಘಟಕದ ಹಳೆಯ ಯಂತ್ರೋಪಕರಣಗಳು ಮತ್ತು ನಿರುಪಯುಕ್ತ ಸಾಮಗ್ರಿಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡಲು ಆಡಳಿತ ಮಂಡಳಿಯು ಕ್ರಮ ಜರುಗಿಸಿರುತ್ತದೆ. ಅದರಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಒಟ್ಟು 42 ಬಿಡ್ಡುದಾರರಲ್ಲಿ ಟೆಂಡರ್ ಷರತ್ತುಗಳಂತೆ 27 ಬಿಡ್ಡುದಾರರು ಅರ್ಹತೆ ಹೊಂದಿರುತ್ತಾರೆ. ಈ ಪೈಕಿ ಮೆ॥ ನ್ಯೂ ರಾಯಲ್ ಟ್ರೇಡರ್, ಚೆನ್ನೈ ಇವರು ಅತಿ ಹೆಚ್ಚಿನ ಬಿಡ್ಡು ಸಲ್ಲಿಸಿ ಯಶಸ್ವಿ ಬಿಡ್ಡುದಾರರಾಗಿರುತ್ತಾರೆ. ಈ ಟೆಂಡರ್ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಬಿಡ್ಡು ಮೊತ್ತ ನೀಡಿದ್ದ 3 ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಬಿಡ್ಡುದಾರರ ಹೆಸರು | ಪ್ರತಿ ಕೆ.ಜಿ.ಗೆ ನಮೂದಿಸಿದ ಬಿಡ್ ಮೊತ್ತ (ರೂ.ಗಳಲ್ಲಿ) |
|---|---|---|
| 1. | ಮೆ॥ನ್ಯೂ ರಾಯಲ್ ಟ್ರೇಡರ್ಸ್ | 82.00 |
| 2. | ಮೆ॥ಎಂ.ಎನ್. ವೇಸ್ಟ್ ಪೇಪರ್ & ಸ್ಕ್ರ್ಯಾಪ್ | 80.50 |
| 3. | ಮೆ॥ಕೆ.ಆರ್. ಮಣಿಯಾ ಅಂಡ್ ಸನ್ಸ್ | 62.00 |

ಮೆ॥ನ್ಯೂ ರಾಯಲ್ ಟ್ರೇಡರ್ ಇವರು ಹೆಚ್ಚಿನ ಬಿಡ್ಡು ಮೊತ್ತ ಪ್ರತಿ ಕೆ.ಜಿ.ಗೆ ರೂ.82.00ರಂತೆ ನೀಡಿರುತ್ತಾರೆ. ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ತಾಂತ್ರಿಕ ಸಮಿತಿಯು ಕೈಗೊಂಡ ತೀರ್ಮಾನದಂತೆ, ಸದರಿ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರರೆಂದು ಪರಿಗಣಿಸಿ, ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಕಾರ್ಖಾನೆಯ ನಿರುಪಯುಕ್ತ ಸಾಮಗ್ರಿಗಳ ಒಟ್ಟು ದಾಸ್ತಾನು 1,139.379 ಮೆ.ಟನ್ನುಗಳಷ್ಟಿದ್ದು, ಇದರ ಒಟ್ಟು ಮೌಲ್ಯ ರೂ.9,34,29,078/-ಗಳಾಗುತ್ತದೆ. ಈ ಮೊತ್ತವು ಎಲ್ಲಾ ವಿಧದ ತೆರಿಗೆಗಳು, ಇ.ಎಂ.ಡಿ. ಮೊತ್ತ ರೂ.25.00 ಲಕ್ಷ ಹಾಗೂ ಭದ್ರತಾ ಠೇವಣಿ ಮೊತ್ತ ರೂ.50.00 ಲಕ್ಷಗಳನ್ನು ಒಳಗೊಂಡಿರುತ್ತದೆ.

ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ತಾಂತ್ರಿಕ ಸಮಿತಿಯು ಕೈಗೊಂಡ ನಿರ್ಣಯದ ಪ್ರಕಾರ ಸ್ಕ್ರ್ಯಾಪ್ ದರ ಪ್ರತಿ ಕೆ.ಜಿ.ಗೆ ರೂ.82/- ದರ ನಿಗದಿ ಮಾಡಿದ್ದು, ಇದು ಜಿಎಸ್‌ಟಿಯನ್ನು ಸಹ ಒಳಗೊಂಡಿರುತ್ತದೆ. ಅದರಂತೆ ಖರೀದಿದಾರರು ಕಾರ್ಖಾನೆಗೆ ಇ.ಎಂ.ಡಿ. ಮೊತ್ತ ರೂ.25.00 ಲಕ್ಷಗಳನ್ನು ಮತ್ತು ಭದ್ರತಾ ಠೇವಣಿ ಮೊತ್ತ ರೂ.50.00 ಲಕ್ಷಗಳನ್ನು ಸೇರಿದಂತೆ ನಿರುಪಯುಕ್ತ ಸಾಮಗ್ರಿಗಳ ಬಾಬ್ತು ರೂ.909.00 ಲಕ್ಷಗಳನ್ನು ಪಾವತಿಸಿರುತ್ತಾರೆ. ಈ ಪೈಕಿ ರೂ.1.75 ಕೋಟಿಗಳ ಜಿಎಸ್‌ಟಿ ಮೊತ್ತವನ್ನು ಕಾರ್ಖಾನೆಯ ವತಿಯಿಂದ ಪಾವತಿ ಮಾಡಲಾಗಿರುತ್ತದೆ.

ಕಾರ್ಖಾನೆ ನಿರುಪಯುಕ್ತ ಸಾಮಗ್ರಿಗಳ ಖರೀದಿದಾರರಿಂದ ಭದ್ರತೆಗಾಗಿ ರೂ.5.00 ಕೋಟಿಗಳ ಬ್ಯಾಂಕ್ ಗ್ಯಾರಂಟಿಯನ್ನು ಪಡೆಯಬೇಕಾಗಿತ್ತು. ಖರೀದಿ ಪ್ರಕ್ರಿಯೆ ಮುಗಿದ ನಂತರ ಈ ಮೊತ್ತವನ್ನು ಹಿಂದಿರುಗಿಸಬೇಕಾಗಿತ್ತು. ಆದರೆ, ಕಾರ್ಖಾನೆಯವರು ಈ ಮೊತ್ತವನ್ನು ಪಡೆದಿರುವುದಿಲ್ಲ.

ಸದರಿ ಕಾರ್ಖಾನೆಯಿಂದ ಬಾಕಿದಾರರಿಗೆ ಪಾವತಿಸಲು ಹಣದ ಅವಶ್ಯಕತೆ ಇದ್ದಾಗ ನಿರುಪಯುಕ್ತ ಸಾಮಗ್ರಿಗಳ ಖರೀದಿದಾರರು ಕಾರ್ಖಾನೆಯ ಬ್ಯಾಂಕ್ ಖಾತೆಗೆ ರೂ.2.50 ಕೋಟಿಯಷ್ಟು ಹಣ ಮುಂಗಡವಾಗಿ ಜಮಾ ಮಾಡಿರುವುದರಿಂದ ಹಾಗೂ ಆಗಿಂದಾಗ್ಗೆ ಮುಂಗಡವಾಗಿ ಹಣ ಜಮಾ ಮಾಡುತ್ತಿದ್ದುದರಿಂದ ಕಾರ್ಖಾನೆಗೆ ಸಾಲ ತೀರಿಸಲು ಅನುಕೂಲವಾಗಿರುತ್ತದೆ. ಆದ್ದರಿಂದ ಕಾರ್ಖಾನೆಯ ನಿರುಪಯುಕ್ತ ಸಾಮಗ್ರಿಗಳ ಖರೀದಿದಾರರಿಂದ ಬ್ಯಾಂಕ್ ಗ್ಯಾರಂಟಿಗೆ ರಿಯಾಯಿತಿ ನೀಡಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬ್ರಹ್ಮಾವರ, ಉಡುಪಿ ಜಿಲ್ಲೆ ಇವರು ತಿಳಿಸಿರುತ್ತಾರೆ.

ಕಾರ್ಖಾನೆಯಿಂದ ಖರೀದಿದಾರರಿಗೆ ನೀಡಲಾದ ಲೆಟರ್ ಆಫ್ ಇಂಡೆಂಟ್ ಪ್ರಕಾರ ಸ್ಕ್ರಾಪ್ ದರ ಕೆ.ಜಿ. ಒಂದಕ್ಕೆ ರೂ.82/- ಮತ್ತು ಜಿಎಸ್‌ಟಿ ಹೊರತುಪಡಿಸಿ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ ಮತ್ತು ಖರೀದಿದಾರರು ಅದನ್ನು ಒಪ್ಪಿಕೊಂಡಿರುತ್ತಾರೆ. ಈ ಸಂಬಂಧ ದಿನಾಂಕ:17.11.2022 ರಂದು ಖರೀದಿದಾರರಾದ ಮೆ|| ನ್ಯೂ ರಾಯಲ್ ಟ್ರೇಡರ್, ಚೆನ್ನೈ ಇವರಿಗೆ ಕಾರ್ಖಾನೆಯಿಂದ ಲೀಗಲ್ ನೋಟಿಸ್ ಜಾರಿ ಮಾಡಲಾಗಿದ್ದು, ಕಾರ್ಖಾನೆಗೆ ನಿರುಪಯುಕ್ತ ಸಾಮಗ್ರಿಗಳ ಬಾಬು ಮತ್ತು ಶೇ.18 ರಂತೆ ಜಿಎಸ್‌ಟಿ ಸೇರಿದಂತೆ ಬರಬೇಕಾಗಿರುವ ರೂ.2,27,56,038/-ಗಳನ್ನು ಪಾವತಿ ಮಾಡುವಂತೆ, ತಪ್ಪಿದಲ್ಲಿ ವಸೂಲಾತಿ ಸಂಬಂಧ ಕಾನೂನು ಕ್ರಮ ಕೈಗೊಳ್ಳಲು ಸೂಕ್ತ ನ್ಯಾಯಾಲಯದ ಮೊರೆ ಹೋಗುವುದಾಗಿ ತಿಳಿಸಲಾಗಿರುತ್ತದೆ.

ಕಾರ್ಖಾನೆಯ ಆಡಳಿತ ಮಂಡಳಿಯು 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಲು ವಿಫಲವಾಗಿರುವುದಾಗಿ ತಿಳಿದು ಬಂದಿರುತ್ತದೆ ಹಾಗೂ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ನಿಗದಿತ ಸಮಯದೊಳಗೆ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಲು ವಿಫಲವಾಗಿರುತ್ತದೆ. ಕಾರ್ಖಾನೆಯ 2022-23ನೇ ಸಾಲಿನ ವಾರ್ಷಿಕ ಸಭೆಯನ್ನು ದಿನಾಂಕ:25.09.2023ರಂದು ನಡೆಸಿರುತ್ತದೆ. ಸದರಿ ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿರುತ್ತದೆ.

1. ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣಗಳ ಮಾರಾಟದಲ್ಲಿ ಸದಸ್ಯರುಗಳು ಮಾಡಿದ ಆರೋಪಗಳನ್ನು ಸಹಕಾರ ಕಾಯ್ದೆಯಂತೆ ನಿಯಮಾನುಸಾರ ಸಹಕಾರ ಇಲಾಖೆಯಿಂದ ತನಿಖೆ ಮಾಡಿಸಬಹುದೆಂದು ನಿರ್ಣಯಿಸಲಾಗಿದೆ.
2. ಇದಲ್ಲದೆ, ಕಾರ್ಖಾನೆಯ 2021-22ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರಗಳು ಮಹಾಸಭೆಯಲ್ಲಿ ಮಂಡನೆಯಾಗದಿರುವುದರಿಂದ, ಕಾರ್ಖಾನೆಯ 2021-22 ಮತ್ತು 2022-23ನೇ ಸಾಲಿನ ಎರಡು ವರ್ಷದ ಲೆಕ್ಕಪತ್ರಗಳನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯಿಂದ ಲೆಕ್ಕಪರಿಶೋಧನೆ ಮಾಡಿಸಲು ಸರ್ವಾನುಮತಯಿಂದ ಅಂಗೀಕರಿಸಲಾಗಿದೆ.

ಸದರಿ ಕಾರ್ಖಾನೆಯ ಕಟ್ಟಡ ಮತ್ತು ಯಂತ್ರೋಪಕರಣಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಸಂಬಂಧ ಶ್ರೀ ಸತೀಶ್ ಕೆ.ಸಿ. ಪ್ರಧಾನ ಕಾರ್ಯದರ್ಶಿಗಳು, ಉಡುಪಿ ಜಿಲ್ಲಾ ರೈತ ಸಂಘ, ಕುಂದಾಪುರ ಇವರು ಮಾನ್ಯ ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ಉಡುಪಿ ನ್ಯಾಯಾಲಯದಲ್ಲಿ ಖಾಸಗಿ ದೂರು ಸಂಖ್ಯೆ 163/2023 ಅನ್ನು ದಾಖಲಿಸಿದ್ದು, ಸದರಿ ದೂರಿನನ್ವಯ ಬ್ರಹ್ಮಾವರ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಕಾರ್ಖಾನೆಯ 3 ಕಂಪ್ಯೂಟರ್ ಹಾರ್ಡ್ ಡಿಸ್ಕಗಳನ್ನು ವಶಪಡಿಸಿಕೊಂಡು ಸಂಘದ ದಾಖಲಾತಿ ಮಾಹಿತಿ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.ಪ್ರಸ್ತುತ ವಿಚಾರಣೆ ಪ್ರಗತಿಯಲ್ಲಿದೆ. ಆದಾಗ್ಯೂ, ದಿನಾಂಕ:25.09.2023ರಂದು ಜರುಗಿದ ಕಾರ್ಖಾನೆಯ ಆಡಳಿತ ಮಂಡಳಿಯ ವಾರ್ಷಿಕ ಮಹಾಸಭೆಯಲ್ಲಿ 2021-22 ಮತ್ತು 2022-23ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿಸಲು ತೀರ್ಮಾನಿಸಿರುವುದರಿಂದ ಲೆಕ್ಕ ಪರಿಶೋಧನಾ ವರದಿಯನ್ನು ಪರಿಗಣಿಸಿ, ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

---

ಸಂಖ್ಯೆ: ಸಿಐ 337 ಸಿಓಎಫ್ 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು